# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 891 |
| ಸದಸ್ಯರ ಹೆಸರು | : | ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ತಾಲ್ಲೂಕು ಮಟ್ಟದ "ವಾಲ್ಮೀಕಿ ಭವನ" ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಸರ್ಕಾರದ ಆದೇಶ ಸಂಖ್ಯೆ:ಸಕಇ/254/ಪವಯೋ/2012, ದಿನಾಂಕ: 02.02.2013ರಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ತಾಲ್ಲೂಕು ಮಟ್ಟದ ವಾಲ್ಮೀಕಿ ಭವನ ನಿರ್ಮಾಣ ಮಾಡಲು ರೂ.100.00 ಲಕ್ಷಗಳಿಗೆ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ. |
| ಆ) | ಸದರಿ ಭವನ ನಿರ್ಮಾಣ ಮಾಡಲು ಯಾವ ವರ್ಷದಲ್ಲಿ ಮಂಜೂರಾತಿ ನೀಡಲಾಗಿದೆ; ಮಂಜೂರಾಗಿರುವ ಅನುದಾನ ಎಷ್ಟು; ಬಿಡುಗಡೆ ಮಾಡಿರುವ ಅನುದಾನ ಎಷ್ಟು? (ಸಂಪೂರ್ಣ ವಿವರ ನೀಡುವುದು) | 2013-14ನೇ ಸಾಲಿನಲ್ಲಿ ಸದರಿ ಭವನ ನಿರ್ಮಾಣ ಮಾಡಲು ಮಂಜೂರಾತಿ ನೀಡಿದ ರೂ.100.00 ಲಕ್ಷಗಳ ಪೈಕಿ ಮೊದಲನೇ ಕಂತಿನಲ್ಲಿ ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>ಸದರಿ ಭವನದ ಕಾಮಗಾರಿಯನ್ನು ಪ್ರಾರಂಭಿಸಲು ನಿವೇಶನ ಲಭ್ಯವಿಲ್ಲದ ಕಾರಣ ಹಾಗೂ ನಿಗಧಿತ ಕಾಲಾವಧಿಯಲ್ಲಿ ಸದರಿ ಭವನದ ನಿರ್ಮಾಣ ಕಾಮಗಾರಿ ಪ್ರಾರಂಭವಾಗದೇ ಇರುವುದರಿಂದ ಬಿಡುಗಡೆ ಮಾಡಿದ ರೂ.25.00 ಲಕ್ಷಗಳನ್ನು ದಿನಾಂಕ:24.12.2018 ರಂದು ಕೇಂದ್ರ ಕಛೇರಿಗೆ ಹಿಂದಿರುಗಿಸಿರುತ್ತಾರೆ.<br><br>ವಾಲ್ಮೀಕಿ ಭವನವನ್ನು ನಿರ್ಮಿಸಲು ದಿನಾಂಕ02.03.2018ರಂದು ಪುರಸಭೆ, ಮಾನ್ವಿ ರವರು ನಿವೇಶನವನ್ನು ಮಂಜೂರು ಮಾಡಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ:ಸಕಇ/338/ಪಕವಿ/2018, ದಿನಾಂಕ:25.03.2019ರ ಪರಿಷ್ಕೃತ ಮಾರ್ಗಸೂಚಿಯನ್ವಯ ತಾಲ್ಲೂಕು ಮಟ್ಟದ ವಾಲ್ಮೀಕಿ ಭವನ ನಿರ್ಮಾಣ ಮಾಡಲು ರೂ.200.00 ಲಕ್ಷಗಳಿಗೆ ಮಂಜೂರಾತಿ ನೀಡಲು ಅವಕಾಶವಿರುತ್ತದೆ.<br><br>ಪ್ರಸ್ತುತ ಜಾರಿಯಲ್ಲಿರುವ ವಾಲ್ಮೀಕಿ ಭವನ ನಿರ್ಮಾಣ ಮಾರ್ಗಸೂಚಿಯನ್ವಯ, ರೂ.200.00 ಲಕ್ಷಗಳಿಗೆ ಜಿಲ್ಲಾಧಿಕಾರಿಗಳು, ರಾಯಚೂರು ರವರು ತಮ್ಮ ಹಂತದಲ್ಲಿಯೇ ರೂ.200.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ:ಸಕಇ/254/ಪವಯೋ/2012, ದಿನಾಂಕ:02.02.2013 ರಲ್ಲಿ ರೂ.100.00 ಲಕ್ಷಗಳಿಗೆ ನೀಡಿರುವ ಮಂಜೂರಾತಿ ಆದೇಶವನ್ನು ರದ್ದುಪಡಿಸಿ, ಸರ್ಕಾರದ ಪರಿಷ್ಕೃತ ಆದೇಶದನ್ವಯ ರೂ.200.00 ಲಕ್ಷಗಳಿಗೆ ಮಂಜೂರಾತಿ ಹಾಗೂ ಅನುದಾನ ಬಿಡುಗಡೆಗೆ ಆದೇಶ ಕೋರಿ ದಿನಾಂಕ:20.08.2026ರಂದು ಸರ್ಕಾರದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಮಂಜೂರಾತಿ ನೀಡಿ ಮುಂದಿನ ಕ್ರಮವಹಿಸಲಾಗುವುದು. |

STW/SECB/STC/223/2026

(ಟಿ. [illegible]ಮೂರ್ತಿ)
ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು